4 ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಸ್ಪೇಷಲ್ ನ್ಯಾಯಾಧೀಶರು (ಪಿಸಿಎ) ಬೆಳಗಾವಿ ಇವರ ನ್ಯಾಯಾಲಯದಲ್ಲಿ
ಮುಕ್ಕಾಂಃ ಬೆಳಗಾವಿ.

ಸೇಷನ್ಸ್ ಕೇಸ್ ನಂಃ 239/2022
ಫ್ರಾಸಾಃ 2
ಆ ಸಾಃ 2

ಸಾಕ್ಷಿಯ ಹೆಸರುಃ ನಾಗೇಶ ಭೀಮಪ್ಪ ಗೋಣಿ

ತಂದೆಯ ಹೆಸರುಃ ಭೀಮಪ್ಪ

ವಯಸ್ಸುಃ 37 ವರ್ಷ

ಉದ್ಯೋಗಃ ಗೌಂಡಿ ಕೆಲಸ

ವಾಸ್ತವ್ಯಃ ಎಂ.ಕೆ.ಹುಬ್ಬಳ್ಳಿ

ದಿನಾಂಕಃ **23-05-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಈ ಕೇಸಿನ ಫಿರ್ಯಾದಿ ಫ್ರಾಸಾ-1 ಬಾಳೇಶ ನನ್ನ ತಮ್ಮ. ನನಗೆ ಚಾಸಾ-3 ಮಂಜುನಾಥ ಚಂದರಗಿ ಗೊತ್ತು. ನನಗೆ ಚಾಸಾ-6 ಸುರೇಶ ಪೂಜಾರ ಗೊತ್ತು. ಅವರು ಇಂಚಲದವರು. ಚಾಸಾ-6 ಸುರೇಶ ಪೂಜಾರ ಇವರು ಮೊದಲು ನನ್ನ ಕೋಳಿ ಫಾರ್ಮನಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ತಮ್ಮ ಫ್ರಾಸಾ-1 ಬಾಳೇಶ ಇವರು ಆತನ ಮೊಬೈಲ್ ಕಳೆದು ಹೋಗಿದೆ ಎಂದು ಪೊಲೀಸರಿಗೆ ದೂರು ಕೊಟ್ಟಿದ್ದನು. ಫ್ರಾಸಾ-1 ಬಾಳೇಶ ಈತನು ಆತನ

ಮೊಬೈಲ್ ಫೋನನ್ನು ಯಾರೋ ಕಳ್ಳತನ ಮಾಡಿದ್ದಾರೆ ಎಂದು ನನಗೆ ಹೇಳಿದ್ದನು. ಎಂ.ಕೆ.ಹುಬ್ಬಳ್ಳಿಯಿಂದ ಆತನ ಮೊಬೈಲ್ ನ್ನು ಕಳ್ಳತನ ಮಾಡಿಕೊಂಡು ಹೋಗಿದ್ದರು ಎಂದು ಹೇಳಿದ್ದನು. ಯಾರು ಕಳ್ಳತನ ಮಾಡಿದರೆಂದು ನನಗೆ ಹೇಳಿರುವುದಿಲ್ಲ. ಎಂ.ಕೆ.ಹುಬ್ಬಳ್ಳಿಯ ಬ್ರಿಡ್ಜ ಹತ್ತಿರ ಅಂಡರಪಾಸ್‌ನ ಪ್ರೇರಣಾ ಸ್ಕೂಲ್ ಹತ್ತಿರ ಆತನ ಮೊಬೈಲ್ ಫೋನನ್ನು ಯಾರೋ ಕಳ್ಳತನ ಮಾಡಿಕೊಂಡು ಹೋಗಿದ್ದಾರೆ ಎಂದು ಹೇಳಿದ್ದನು. ಫಿರ್ಯಾದಿದಾರರ ನನ್ನಲ್ಲಿ ರಾತ್ರಿ 9 ಗಂಟೆಗೆ ಆತನ ಮೊಬೈಲ್ ಫೋನ್ ಕಳ್ಳತನ ಮಾಡಲಾಗಿತ್ತು ಎಂದು ಹೇಳಿದ್ದನು. ನಾನು ಘಟನೆಯನ್ನು ಪ್ರತ್ಯಕ್ಷ ನೋಡಿರುವುದಿಲ್ಲ. ಫಿರ್ಯಾದಿದಾರ ಬಾಳೇಶ ನನ್ನಲ್ಲಿ ಆತನಿಗೆ ಯಾರೋ ಖಾರದ ಪುಡಿಯನ್ನು ಕಣ್ಣಿಗೆ ಗೊಜ್ಜಿ ಆತನ ಮೊಬೈಲ್ ಫೋನನ್ನು ಕಳ್ಳತನ ಮಾಡಿಕೊಂಡು ಹೋಗಿದ್ದರು ಎಂದು ನನಗೆ ಫಿರ್ಯಾದಿದಾರನು ಪೊಲೀಸ್ ಠಾಣೆಗೆ ದೂರು ಕೊಡಲು ಹೋದಾಗ ಘಟನೆಯಾದ ನಂತರ ಮುಂಜಾನೆ ಪೊಲೀಸ್ ಠಾಣೆಗೆ ಹೋಗುವಾಗ ಹೇಳಿದ್ದನು. ಫಿರ್ಯಾದಿದಾರನು ನನಗೆ ಅಲ್ಲಿ ಎಷ್ಟು ಜನ ಇದ್ದು ಆತನಿಗೆ ಖಾರದ ಪುಡಿ ಗೊಜ್ಜಿ ಮೊಬೈಲ್ ತೆಗೆದುಕೊಂಡು ಹೋದರು ಎಂದು ನನಗೆ ಹೇಳಿಲ್ಲ. ಖಾರದ ಪುಡಿ ಗೊಜ್ಜಿದವರು ಹೇಗೆ ಬಂದರೆಂದು ನನಗೆ ಗೊತ್ತಿಲ್ಲ. ನನ್ನ ತಮ್ಮ ಬಾಳೇಶ ಶೌಚಕ್ಕೆಂದು ಹೋದಾಗ ಯಾರೋ ಖಾರದ ಪುಡಿ ಗೊಜ್ಜಿ ಮೊಬೈಲ್ ತೆಗೆದುಕೊಂಡು ಹೋದರು ಎಂದು ಹೇಳಿದನು. ನನ್ನ ತಮ್ಮ ಬಾಳೇಶ ಯಾರೋ ಬೈಕಿನಲ್ಲಿ ಬಂದವರು ಆತನಿಗೆ ಖಾರದ ಪುಡಿ ಗೊಜ್ಜಿ ಮೊಬೈಲ್ ಫೋನ್ ತೆಗೆದುಕೊಂಡು ಹೋದರು ಎಂದು ಹೇಳಿದನು. ಅಲ್ಲಿ ನನ್ನ ತಮ್ಮನ

ಬಳಿ ಬಂದವರು ಏನು ಕೇಳುತ್ತಾ ಆತನ ಬಳಿ ಬಂದರು ಎಂದು ನನಗೆ ಆತ ಹೇಳಿಲ್ಲ. ನನ್ನ ತಮ್ಮ ದೂರು ಕೊಟ್ಟ ನಂತರ ಪೊಲೀಸರು ಅಲ್ಲಿ ಬ್ರಿಡ್ಜನ ಅಂಡರಪಾಸ್ ಪ್ರೇರಣಾ ಸ್ಕೂಲ್ ಹತ್ತಿರ ಬಂದಿದ್ದರು, ಅಲ್ಲಿ ಏನು ಮಾಡಿದರು ಎಂದು ನನಗೆ ಗೊತ್ತಿಲ್ಲ. ಅಲ್ಲಿ ಪೊಲೀಸರು ಒಂದು ಚೌಕಾಕಾರದಲ್ಲಿ ಪಟ್ಟಿ ಕಟ್ಟಿ ಫೋಟೋ ತೆಗೆದರು, ಅಲ್ಲಿ ಪೊಲೀಸರು ನನಗೆ ಸಹಿ ಮಾಡು ಎಂದು ಹೇಳಿದ ಕಾರಣ ನಾನು ಪೊಲೀಸರು ಏನೋ ಬರೆದಿದ್ದ ದಾಖಲೆಗೆ ಸಹಿ ಹಾಕಿದ್ದೆನು. ಏನು ಬರೆದರು ಎಂದು ನನಗೆ ಗೊತ್ತಿಲ್ಲ, ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಾನು ನಿಪಿ-2ಕ್ಕೆ ಸಹಿ ಹಾಕುವಾಗ ನನ್ನ ತಮ್ಮ ಬಾಳೇಶ ಅಲ್ಲಿ ಇದ್ದನು. ಅಲ್ಲಿ ತೆಗೆದ ಫೋಟೋಗಳನ್ನು ನಾನು ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-3 ಮತ್ತು 4 ಎಂದು ಗುರುತಿಸಲಾಗಿದೆ. ನಿಪಿ-3 ಮತ್ತು 4 ಫೋಟೋದಲ್ಲಿ ಬಾಳೇಶ ಈತನ ಫೋಟೋ ಇದ್ದು ಇದೇ ಜಾಗದಲ್ಲಿ ಆತನ ಮೊಬೈಲ್ ಫೋನ ಕಳ್ಳತನ ಮಾಡಿದ್ದು ಎಂದು ಆತ ಆ ಫೋಟೋದಲ್ಲಿ ತೋರಿಸುತ್ತಿದ್ದಾನೆ. ಪೊಲೀಸರು ನನ್ನ ಜವಾಬ ತೆಗೆದುಕೊಂಡಿದ್ದಾರೆ. ನನ್ನ ಜವಾಬ ಎಂದು ಪೊಲೀಸರು ಏನು ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಆದರೇ ಸಹಿ ಮಾತ್ರ ಪಡೆದುಕೊಂಡಿದ್ದರು. ನನ್ನ ತಮ್ಮನ ಮೊಬೈಲ್ ಫೋನನ್ನು ನೋಡಿದರೇ ನನಗೆ ಗುರುತು ಹಿಡಿಯಲು ಆಗುವುದಿಲ್ಲ. ಪೊಲೀಸ್ ಠಾಣೆಗೆ ಪೊಲೀಸರು ನನ್ನನ್ನು ಎರಡು ಬಾರಿ ಕರೆಸಿದ್ದರು, ಮತ್ತೆ ಏಲ್ಲೂ ಕರೆಸಿಲ್ಲ. ಪೊಲೀಸರು ನನ್ನ ಸುಮಾರು ಸಹಿಗಳನ್ನು ಪಡೆದುಕೊಂಡಿದ್ದರು, ಆ ಸಹಿಗಳನ್ನು ಏಲ್ಲಿ ಹಾಕಿದ್ದೇನೆ

ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಮ್ಮ ಬಾಳೇಶ ಘಟನಾ ಸ್ಥಳವನ್ನು ತೋರಿಸುವ ಕಾಲಕ್ಕೆ ಪೊಲೀಸರು ನನ್ನ 7-8 ಸಹಿಗಳನ್ನು ಪಡೆದುಕೊಂಡಿದ್ದರು. ನನಗೆ ಈಗ ತೋರಿಸಿದ ಸಹಿ ನನ್ನದು. ಸಾಕ್ಷಿಯು ಆ ಸಹಿಯನ್ನು ಗುರುತಿಸಿದ್ದು ಗುರುತು ಹಿಡಿಯುವ ಕವಾಯತ್ತಿನ ನಡುವಳಿಕೆಯ ಪ್ರಮಾಣ ಪತ್ರಗಳಲ್ಲಿರುವ ಸಹಿಗಳನ್ನು ಸಾಕ್ಷಿಯು ಗುರುತಿಸಿದ್ದರಿಂದ ಆ ಆ ಪ್ರಮಾಣ ಪತ್ರಗಳನ್ನು ನಿಪಿ-8, ನಿಪಿ-9, ನಿಪಿ-10 ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಗಳನ್ನು ನಿಪಿ-8(ಎ), ನಿಪಿ-9(ಎ), ನಿಪಿ-10(ಎ) ಎಂದು ಗುರುತಿಸಲಾಯಿತು. ನಿಪಿ-8 ರಿಂದ ನಿಪಿ-10 ರಲ್ಲಿರುವ ಸಹಿಗಳನ್ನು ನಾನು ಪೊಲೀಸ್ ಠಾಣೆಯಲ್ಲಿ ಹಾಕಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ನನಗೆ ಪೊಲೀಸರು ಯಾವುದೇ ಆರೋಪಿತರನ್ನು ತೋರಿಸಿರುವುದಿಲ್ಲ. ನನ್ನನ್ನು ಪೊಲೀಸ್ ಠಾಣೆಗೆ ಹೊರತುಪಡಿಸಿ ಬೇರೆಲ್ಲೂ ಕರೆಸಿರುವುದಿಲ್ಲ. ನನ್ನ ತಮ್ಮ ಬಾಳೇಶ 5 ಜನರ ವಿರುದ್ಧ ದೂರು ಕೊಟ್ಟಿದ್ದೇನೆ ಎಂದು ಹೇಳುತ್ತಿದ್ದನು. ನನಗೆ ತೋರಿಸಿದ ಮುಮಾ-1 ಮೊಬೈಲ್ ಫೋನ್ ಯಾರದ್ದು ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ಈಗ ತೋರಿಸಿದ ಬಟ್ಟೆಗಳು ಯಾರದು ಎಂದು ನನಗೆ ಗೊತ್ತಿಲ್ಲ, ನಾನು ಅವುಗಳನ್ನು ಈ ಹಿಂದೆ ನೋಡಿರುವುದಿಲ್ಲ. ನನಗೆ ನನ್ನ ತಮ್ಮ ಬಾಳೇಶ ಆತನ ಮೊಬೈಲ್ ಫೋನ್ ಕಳ್ಳತನ ಮಾಡಿದವರ ಚಹರೆ ಹೇಳಿರುವುದಿಲ್ಲ.

( ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು

ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 17-03-2020 ರಂದು ಪೊಲೀಸರು ನನಗೆ ಘಟನಾ ಸ್ಥಳಕ್ಕೆ ಕರೆಸಿದ್ದರು ಎಂದರೆ ನಿಜ. ನನ್ನ ತಮ್ಮ ಬಾಳೇಶ ಈತನು ಇದೇ ಜಾಗದಿಂದ ಇಬ್ಬರು ನನ್ನ ಮೊಬೈಲ್ ಫೋನನ್ನು ಕಸಿದುಕೊಂಡು ಹೋದರೆಂದು ಜಾಗ ತೋರಿಸಿದ ಮೇರೆಗೆ ಪೊಲೀಸರು ನನಗೆ ಈಗ ಓದಿ ಹೇಳಿದಂತೆ ನಿಪಿ-2 ರಂತೆ ಪಂಚನಾಮೆ ಮಾಡಿದರು ಎಂದರೆ ನಿಜ. ನಿಪಿ-2 ನ್ನು ನಿಮಗೆ ಪೊಲೀಸರು ಓದಿ ಹೇಳಿದ ನಂತರ ಸಹಿ ಪಡೆದಿದ್ದು ಎಂದರೆ ಸಾಕ್ಷಿಯು ಪೊಲೀಸರು ನನಗೆ ಅದನ್ನು ಓದಿ ಹೇಳಿಲ್ಲ ಸಹಿ ಹಾಕು ಎಂದು ಹೇಳಿದ ಕಾರಣ ಸಹಿ ಹಾಕಿದೆನು, ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ದಿನಾಂಕ 17-03-2020 ರಂದು ಪೊಲೀಸರಿಗೆ ನಾನು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಕೊಟ್ಟ ಹೇಳಿಕೆಯಲ್ಲಿ ನಾನು ಮತ್ತು ಸುರೇಶ ರಾಮಪ್ಪ ಪೂಜಾರ ಕೂಡಿ ನಮ್ಮೂರ ಬಸಸ್ಟ್ಯಾಂಡ್ ಕಡೆಯಿಂದ ಮಾತನಾಡುತ್ತಾ ಇಂಡಿಯನ್ ಪೆಟ್ರೋಲ್ ಪಂಪ್ ಎದುರುಗಡೆ ಇರುವ ರಾಷ್ಟ್ರೀಯ ಅಂಡರಪಾಸ್ ಬ್ರಿಡ್ಜ ಕಡೆಯಿಂದ ಪ್ರೇರಣಾ ಶಾಲೆಯ ಕಡೆಗೆ ವಾಕಿಂಗ್ ಮಾಡುತ್ತಾ ದಿನಾಂಕ 17-03-2020 ರ ರಾತ್ರಿ 9-30 ಗಂಟೆಗೆ ಹೋಗುತ್ತಿದ್ದೆವು ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾವು ವಾಕಿಂಗ್

ಮಾಡುತ್ತಾ ಹೋಗುತ್ತಿದ್ದಾಗ ಅಂಡರಪಾಸ್ ಬ್ರಿಡ್ಜ ಕೆಳಗೆ ಲೈಟ್ ಬೆಳಕಿನಲ್ಲಿ ಯಾರೋ 5 ಜನ ಯುವಕರು ಕಪ್ಪು ಬಣ್ಣದ ಹಿರೋ ಸ್ಲೆಂಡರ್ ಹಾಗೂ ಬಜಾಜ್ ಪ್ಲಾಟಿನಾ ಕಂಪನಿಯ ಎರಡು ಮೋಟರ ಸೈಕಲ್ ನಿಲ್ಲಿಸಿಕೊಂಡು ನಿಂತಿದ್ದನ್ನು ನಾವು ನೋಡಿದ್ದೇವೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾವು ವಾಕಿಂಗ್ ಮಾಡುತ್ತಾ ಪ್ರೇರಣಾ ಶಾಲೆಯ ಕಡೆಗೆ ರಾತ್ರಿ 9-45 ಗಂಟೆಗೆ ಹೋಗುತ್ತಿದ್ದಾಗ ಸ್ವಲ್ಪ ದೂರದಲ್ಲಿ ರಸ್ತೆಯ ಬದಿಯಲ್ಲಿ ಬಾಳೇಶ ಸುಣಗಾರ ಈತನು ನಿಂತು ಬಾಯಿ ಮಾಡುತ್ತಿದ್ದನು ಎಂದು ನಾನು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಆಗ ನಾವು ನೋಡಿದಾಗ ಒಂದು ಮೋಟರ ಸೈಕಲ್ ನಲ್ಲಿ ಇಬ್ಬರು ನಮ್ಮ ಮುಂದಿನಿಂದ ಇಟಗಿ ಕ್ರಾಸ್ ಕಡೆಗೆ ಆ ಮೋಟರ ಸೈಕಲ್ ನ್ನು ಓಡಿಸಿಕೊಂಡು ಹೋದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಆಗ ನಾನು ಮತ್ತು ಸುರೇಶ ನನ್ನ ತಮ್ಮ ಬಾಳೇಶ ಈತನ ಬಳಿ ಹೋಗಿ ವಿಚಾರಿಸಲು ಮೋಟರ ಸೈಕಲ್ ಮೇಲೆ ಹೋದ ಆ ಇಬ್ಬರು ಯುವಕರು ನನ್ನ ಕಡೆಗೆ ಬಂದು ಪೆಟ್ರೋಲ್ ಖಾಲಿಯಾಗಿದೆ ಡಬ್ಬಿ ಇದ್ದರೆ ಕೊಡಿ ಎಂದು ಮಾತನಾಡಿಸಿ ನನ್ನ ಮುಖಕ್ಕೆ ಖಾರದ ಪುಡಿ ಗೊಜ್ಜಿ ನನ್ನ ಅಂಗಿಯ ಏದೆಯ ಮೇಲಿನ ಕಿಸೆಯಲ್ಲಿದ್ದ 7000/- ಕಿಮ್ಮತ್ತಿನ ರಿಯಲ್ ಮಿ ಮೊಬೈಲ್ ಹ್ಯಾಂಡ್ ಸೆಟ್ ನ್ನು ಕಸಿದುಕೊಂಡು ಹೋಗಿರುತ್ತಾರೆ ಎಂದು ಹೇಳಿದನು ಎಂದರೆ ಸರಿಯಲ್ಲ, ಈ ಬಗ್ಗೆ ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಉಳಿದ ಮೂರೂ ಜನ ಅಲ್ಲಿ ನಿಂತ ಆರೋಪಿತರು ಆ ಜಾಗದಿಂದ ಮೋಟರ ಸೈಕಲ್ ನಲ್ಲಿ ಓದಿ ಹೋಗ ಬಗ್ಗೆ ನಾವು ಬಾಳೇಶನಿಗೆ ಹೇಳಿದೆವು ಎಂದರೆ ಸರಿಯಲ್ಲ. ಆರೋಪಿತರು 25 ರಿಂದ 30 ವಯಸ್ಸಿನವರು

ಮೈಮೆಲೆ ಕೆಂಪು ಹಳದಿ ನೀಲಿ ಬಣ್ಣದ ಶರ್ಟುಗಳನ್ನು ಹಾಗೂ ಕಪ್ಪು ಬಣ್ಣದ ಪ್ಯಾಂಟುಗಳನ್ನು ಧರಿಸಿರುವುದನ್ನು ನಾವು ನೋಡಿದ್ದೇವೆ ಎಂದರೆ ಸರಿಯಲ್ಲ. ಮೋಟರ ಸೈಕಲ್ ನ್ನು ನಾವು ನೋಡಿದರೇ ಗುರುತಿಸುತ್ತೇವೆ ಎಂದು ಪೊಲೀಸರಿಗೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗ ಓದಿ ಹೇಳಿದಂತೆ ನಾನು ಆರಕ್ಷಕ ವೃತ್ತ ನಿರೀಕ್ಷಕರು ಕಿತ್ತೂರ ಇವರ ಮುಂದೆ ನಿಪಿ-11 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 21-03-2020 ರಂದು ನಮ್ಮನ್ನು ಪೊಲೀಸರು ಪೊಲೀಸ್ ಠಾಣೆಗೆ ಕರೆಯಿಸಿ ಮೊಬೈಲ್ ಹ್ಯಾಂಡಸೆಟ್, ಬಟ್ಟೆಗಳನ್ನು ಹಾಗೂ ಎರಡು ಮೋಟರ ಸೈಕಲ್ ಗಳನ್ನು ತೋರಿಸಿದರು ಎಂದರೆ ಸರಿಯಲ್ಲ. ಬಟ್ಟೆಗಳನ್ನು ನನಗೆ ತೋರಿಸಿದಾಗ ಅದನ್ನೇ ಆರೋಪಿತರು ಧರಿಸದ ಬಟ್ಟೆಗಳೆಂದು ನಾನು ಗುರುತಿಸಿದ್ದೆನು ಎಂದರೆ ಸರಿಯಲ್ಲ. ಅಲ್ಲಿ ನನಗೆ ಪೊಲೀಸ್ ಠಾಣೆಯಲ್ಲಿ ಮೊಟರ ಸೈಕಲ್ ನಂ. ಕೆಎ-25, ಇಎಕ್ಸ-3325 ಮತ್ತು ಕೆಎ-24, ಯು-9715 ನ್ನು ತೋರಿಸಿದಾಗ ಅವುಗಳನ್ನೇ ಆರೋಪಿತರು ಅಲ್ಲಿ ಕೃತ್ಯಕ್ಕೆ ಬಳಸಿದ ಮೋಟರ ಸೈಕಲ್ ಗಳೆಂದು ಹೇಳಿ ಗುರುತಿಸಿದೆನು ಎಂದರೆ ಸರಿಯಲ್ಲ. ನಾನು ಐದೂ ಜನ ಆರೋಪಿತರ ಹೆಸರನ್ನು ಪೊಲೀಸರಿಗೆ ಹೇಳಿ ಹೇಳಿಕೆ ಕೊಟ್ಟಿದ್ದೆನೆ ಎಂದರೆ ಸರಿಯಲ್ಲ. ನನಗೆ ಈಗ ಓದಿ ಹೇಳಿದಂತೆ ನಾನು ಕಿತ್ತೂರಿನ ಆರಕ್ಷಕ ವೃತ್ತ ನಿರೀಕ್ಷಕರ ಸಮಕ್ಷಮ ದಿನಾಂಕ 21-03-2020 ರಂದು ನಿಪಿ-12 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗ ತೋರಿಸದ ಬಟ್ಟೆಗಳನ್ನೇ ಆ ದಿನ ಪೊಲೀಸರು ನನಗ ತೋರಿಸಿದ ಬಟ್ಟೆಗಳು ಎಂದರೆ ಸರಿಯಲ್ಲ. ಆ ಬಟ್ಟೆಗಳನ್ನೇ ಆರೋಪಿತರು ಧರಿಸಿದ್ದು ಎಂದು ನಾನು ಹೇಳಿ ಗುರುತಿಸಿದ್ದೇನೆ ಎಂದರೆ

ಸರಿಯಲ್ಲ. ದಿನಾಂಕ 22-06-2020 ರಂದು ನನ್ನನ್ನು ಮತ್ತು ನನ್ನ ತಮ್ಮ ಬಾಳೇಶ ಮತ್ತು ಚಾಸಾ-6 ಸುರೇಶ ಇವರನ್ನು ಕಿತ್ತೂರ ತಹಶೀಲ್ದಾರವರು ಹಿಂಡಲಗಾ ಜೈಲಿಗೆ ಗುರುತಿನ ಕವಾಯತ್ತು ನಡೆಸುವ ಸಲುವಾಗಿ ಕರೆಸಿದ್ದರು ಎಂದರೆ ಸರಿಯಲ್ಲ. ಹಿಂಡಲಗಾ ಜೈಲಿನಲ್ಲಿ ತಹಶೀಲ್ದಾರವರು ದಿನಾಂಕ 22-06-2020 ರಂದು ಗುರುತಿನ ಕವಾಯತ್ತು ನಡೆಸಿದಾಗ ನಾವು ಆರೋಪಿತರಾದ ಉಮೇಶ ಖಂಡೋಜಿ, ವಾಸಿಮ ಮಾಳಗಿ ಮತ್ತು ಸನಾವುಲ್ಲಾ ದಾದಾಪೀರ ಹೋಳಿ ಅಂದರೆ 1 ರಿಂದ 3 ನೇ ಆರೋಪಿತರನ್ನು ಗುರುತು ಹಿಡಿದು ಅವರೇ ಕೃತ್ಯ ಏಸಗಿದ್ದು ಎಂದು ಗುರುತಿಸಿದ್ದೇವೆ ಎಂದರೆ ಸರಿಯಲ್ಲ. ಆ ಕಾರಣ ಹಿಂಡಲಗಾ ಜೈಲಿನಲ್ಲಿ ನಾನು ನಿಪಿ-8 ರಿಂದ 10 ರಲ್ಲಿರುವ ಪ್ರಮಾಣ ಪತ್ರದಲ್ಲಿರುವ ಸಹಿಗಳನ್ನು ಹಾಕಿದೆನು ಎಂದರೆ ಸರಿಯಲ್ಲ. ಈ ಕೇಸಿನ ಘಟನೆಯನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದರೂ ಸಹ ಪ್ರತ್ಯಕ್ಷ ನೋಡಿಲ್ಲವೆಂದು ಆರೋಪಿತರು ಯಾರೆಂದು ಗೊತ್ತಿಲ್ಲವೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ಸಹಾಯ ಮಾಡಲು ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ವಕೀಲರಿಂದಃ</u>

ಫ್ರಾಸಾ-1 ಬಾಳೇಶ ನಿಮ್ಮ ಖಾಸ ತಮ್ಮನಾ ಎಂದರೆ ಸಾಕ್ಷಿಯು ಅವರು ನನ್ನ ಖಾಸ ತಮ್ಮನಲ್ಲ, ಅವರು ನನ್ನ ಜಾತಿಯವರು, ಆತನು ನನ್ನ ದೂರದ ಸಂಬಂಧಿ ಎಂದರೆ ಚಿಕ್ಕಮ್ಮನ ಮಗ ಆಗಬೇಕು ಎನ್ನುತ್ತಾರೆ. ಬಾಳೇಶ ಆತನು

ನನ್ನಲ್ಲಿ ಆತನ ಮೊಬೈಲ್ ಕಳ್ಳತನವಾಗಿದೆ ಎಂದು ಹೇಳಿ ದೂರು ಕೊಡಲು ಹೋದನು. ಪೊಲೀಸರಿಗೂ ಸಹ ಬಾಳೇಶ ಈತನು ಆತನ ಮೊಬೈಲ್ ಫೋನ್ ಕಳ್ಳತನವಾಗಿದೆ ಎಂದು ಹೇಳಿದ್ದನು ಎಂದರೆ ನಿಜ. ಪೊಲೀಸರಿಗೆ ದೂರನ್ನು ನೀವು ಕೊಟ್ಟಿದ್ದಿರಾ ಅಥವಾ ಬಾಳೇಶ ಕೊಟ್ಟಿದ್ದಾ ಎಂದರೆ ಸಾಕ್ಷಿಯು ನಾನು ಬಾಳೇಶ ಜೊತೆ ಪೊಲೀಸ್ ಠಾಣೆಗೆ ಹೋಗಿಲ್ಲ ಆತ ಮೊದಲು ಪೊಲೀಸ್ ಠಾಣೆಗೆ ಹೋಗಿದ್ದನು ನಂತರ ನಾನು ಮೋಟರ ಸೈಕಲ್ ನಲ್ಲಿ ಪೊಲೀಸ್ ಠಾಣೆಗೆ ಹೋಗಿದ್ದೆನು, ಆಗ ಪೊಲೀಸರು ಬಾಳೇಶನಿಗೆ ಸಹಿ ಹಾಕು ಎಂದು ಹೇಳಿದ ಕಾರಣ ಆತ ದೂರಿಗೆ ಸಹಿ ಹಾಕಿದ್ದು ಎನ್ನುತ್ತಾರೆ. ದೂರಿನಲ್ಲಿ ಏನು ಬರೆಯಲಾಗಿದೆ ಎಂದು ಬಾಳೇಶನಿಗೂ ಗೊತ್ತಿರಲಿಲ್ಲ ಮತ್ತು ನನಗೂ ಗೊತ್ತಿರಲಿಲ್ಲ ಎಂದರೆ ನಿಜ. ಬಾಳೇಶ ಈತನು ನನ್ನಲ್ಲಿ ಆತನ ಕಣ್ಣಿಗೆ ಯಾರೋ ಖಾರದ ಪುಡಿ ಏರಚಿದರು ಎಂದು ನನ್ನ ಬಳಿ ಹೇಳಿಲ್ಲ ಎಂದರೆ ನಿಜ. ಬಾಳೇಶ ಈತನು ಯಾರೋ ಆತನ ಕಣ್ಣಿಗೆ ಖಾರದ ಪುಡಿ ಗೊಜ್ಜಿ ಮೊಬೈಲ್ ಫೋನನ್ನು ಕಳ್ಳತನ ಮಾಡಿಕೊಂಡು ಹೋಗಿದ್ದರು ಎಂದು ನನ್ನಲ್ಲಿ ಹೇಳಿದ್ದನು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಿತ್ತೂರಿನಿಂದ ಬೆಳಗಾವಿಗೆ ಹೋಗುವ ರಸ್ತೆಯಲ್ಲಿ ಇರುವ ಬ್ರಿಡ್ಜ ಹತ್ತಿರ ನಿಪಿ-3 ಮತ್ತು 4 ಫೋಟೋಗಳನ್ನು ತೆಗೆದರು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ-3 ಮತ್ತು 4 ಫೋಟೋದಲ್ಲಿ ಕಾಣುವ ಕೈ ಮಾಡಿದ ಫೋಟೋ ಬಾಳೇಶ ಈತನಿಗೆ ಪೊಲೀಸರು ಕೈ ಮಾಡಿ ತೋರಿಸು ಎಂದು ಹೇಳಿದ ಕಾರಣ ಆತ ಕೈ ಮಾಡಿ ತೋರಿಸಿದಾಗ ತೆಗೆದ ಫೋಟೋ ಎಂದರೆ ನಿಜ. ನಿಪಿ-3 ಮತ್ತು 4 ಯಾವುದರ ಸಂಬಂಧ ಫೋಟೋ

ತೆಗೆದರು ಮತ್ತು ಆ ಸ್ಥಳದಲ್ಲಿ ಏನಾಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ನಿಪಿ-2 ದಾಖಲೆಯನ್ನು ಪೊಲೀಸರೇ ತಯಾರಿಸಿದ್ದರು ಎಂದರೆ ಸರಿ, ಪೊಲೀಸರು ತಯಾರಿಸಿದ ನಿಪಿ-2 ದಾಖಲೆಗೆ ಸಹಿ ಹಾಕು ಎಂದು ಪೊಲೀಸರು ಹೇಳಿದಾಗ ನಾನು ಸಹಿ ಹಾಕಿದ್ದೆನು ಎಂದರೆ ನಿಜ, ನಿಪಿ-2 ರಲ್ಲಿ ಏನು ಬರೆಯಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಪೊಲೀಸರು ಇವತ್ತಿನವರೆಗೂ ನನ್ನ ಯಾವುದೇ ಹೇಳಿಕೆ ಪಡೆದಿಲ್ಲ ಎಂದರೆ ನಿಜ. ಇಲ್ಲಿಯವರೆಗೂ ಬಾಳೇಶನ ಮೊಬೈಲ್ ಫೋನನ್ನು ಯಾರು ಕಳ್ಳತನ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಬಾಳೇಶ ಎಷ್ಟು ಜನರ ಮೇಲೆ ದೂರು ಕೊಟ್ಟನು ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಪೊಲೀಸರು ಪೊಲೀಸ್ ಠಾಣೆಗೆ ಬರುವಂತೆ ನನಗೆ ಯಾವತ್ತೂ ಫೋನ್ ಮಾಡಿಲ್ಲ ಎಂದರೆ ನಿಜ, ಪೊಲೀಸ್ ಠಾಣೆಗೆ ನಾನೇ ಹೋಗಿದ್ದೇನೆ ಎಂದರೆ ನಿಜ. ಘಟನೆಗೆ ಸಂಬಂಧಪಟ್ಟಂತೆ ಯಾವುದೇ ವಿಚಾರ ನನಗೆ ಗೊತ್ತಿಲ್ಲ ಎಂದರೆ ನಿಜ, ಪೊಲೀಸರು ಸಹಿ ಹಾಕು ಎಂದು ಹೇಳಿದ ಕಾರಣ ನಾನು ಸಹಿ ಹಾಕಿದ್ದೇನೆ ಎಂದರೆ ನಿಜ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4** ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು **(**ಪಿಸಿಎ**)** ಬೆಳಗಾವಿ.